ನಿರಾಕರಿಸಬಾರದು. ಹಾಗೆ ನಿರಾಕರಿಸಿದರೆ ಅವನು ಹೇಡಿಯೆಂದು ಪರಿಗಣಿಸಲ್ಪಟ್ಟು ಸೋಲನ್ನೊಪ್ಪಿಕೊಳ್ಳಬೇಕಾಗುತ್ತದೆ. ನನ್ನ ಸಿದ್ಧಾಂತದಲ್ಲೂ ಪಾಂಡಿತ್ಯದಲ್ಲೂ ನನಗೆ ಅಪಾರ ನಂಬಿಕೆ ಇದೆ. ಆದರೆ, ಇಂದು ಶ್ರಾದ್ಧದ ದಿನ ಎಂಬುದರಿಂದ ನಾನು ಬೇರೆ ಯಾವ ಕಾರ್ಯವನ್ನು ಮಾಡುವುದು ಶಾಸ್ತ್ರ ಸಮ್ಮತವಲ್ಲ. ನಾಳೆ ನಮ್ಮ ವಾದವನ್ನು ಆರಂಭಿಸೋಣ" ಎಂದು ಅವರು ಉತ್ತರಿಸಿದರು.

ಶಂಕರರು ಅದಕ್ಕೆ ಒಪ್ಪಿಕೊಂಡರು. ಆದರೆ, 'ವಾದದ ಅಂತ್ಯದಲ್ಲಿ ಮಂಡನ ಮಿಶ್ರ ಸೋತರೆ, ಅವರು ಅವರ ಕುಟುಂಬವನ್ನು ತ್ಯಜಿಸಿ ಸನ್ಯಾಸವನ್ನು ಸ್ವೀಕರಿಸಿ ತನ್ನ ಶಿಷ್ಯರಾಗಿ ಅದ್ವೈತ ಪ್ರಚಾರಕ್ಕೆ ಸಹಕಾರ ನೀಡಲು ತನ್ನೊಂದಿಗೆ ಬರಬೇಕು' ಎಂದು ಶಂಕರರು ನಿಬಂಧನೆ ವಿಧಿಸಿದರು. ತಕ್ಷಣ ಮಂಡನ ಮಿಶ್ರ, "ಹಾಗೆ ನೀವು ಸೋತರೆ ಈ ಕಾಷಾಯ ವಸ್ತ್ರವನ್ನು ತೊರೆದು ವಿವಾಹ ಮಾಡಿಕೊಂಡು ಸಂಸಾರಿಯಾಗಲು ಸಮ್ಮತಿಸುವಿರೇ?" ಎಂದು ಮರುಪ್ರಶ್ನೆ ಹಾಕಿದರು.

ಶಂಕರ, "ಆಹಾ, ಅದಕ್ಕೇನಂತೆ, ಒಪ್ಪಿದೆ" ಎಂದರು.

ಮಂಡನ ಮಿಶ್ರರೂ ಉದ್ವೇಗದಲ್ಲಿ ರೋಷ ಉಂಟಾಗಿ ಶಂಕರರ ಷರತ್ತಿಗೆ ಒಪ್ಪಿಕೊಂಡರು.

ಶಂಕರ ಈಗ ಮತ್ತೊಂದು ಷರತ್ತನ್ನು ಹೇಳಿದರು: "ಹೌದು, ನಿಮ್ಮ ಮಡದಿ ಸರಸವಾಣಿ ನಿಮ್ಮಂತೆಯೇ ಮಹಾ ಪಂಡಿತಳಂತೆ? ಕುಮಾರಿಲರು, 'ಅವರೇ ಮಧ್ಯಸ್ಥಿಕೆ ವಹಿಸಿ ನಮ್ಮ ವಾದವನ್ನು ಗಮನಿಸಿ ನಮ್ಮ ಸೋಲು ಗೆಲುವಿನ ತೀರ್ಪನ್ನು ಹೇಳಲಿ ಎಂದು ಹೇಳಿದ್ದರು.''

ಹೀಗೆ ಮಾತು ಮಾತಿಗೂ ಈ ಆಸಾಮಿ ಕುಮಾರಿಲ, ಕುಮಾರಿಲ ಎಂದು ತನ್ನ ಗುರುವಿನ ಹೆಸರನ್ನು ಹೇಳಿ ತನ್ನ ಬಾಯನ್ನು ಕಟ್ಟಿಹಾಕುತ್ತಾನಲ್ಲ ಎಂದು ಮಂಡನ ಮಿಶ್ರ ಅಂದುಕೊಂಡರು.

ಆದರೆ, ಈತ ಸನ್ಯಾಸಿ. ನೋಡಲಿಕ್ಕೆ ನಿಜವಾದ ಸನ್ಯಾಸಿಯಂತೆಯೇ ಕಾಣುತ್ತಾರೆ. ನಿಜವಾದ ಸನ್ಯಾಸಿಗಳು ಸುಳ್ಳು ಹೇಳುವುದಿಲ್ಲ. ಅಷ್ಟು ಮಾತ್ರವಲ್ಲ, ತನ್ನ ಮಡದಿಯ ಪಾಂಡಿತ್ಯವನ್ನು ಶ್ಲಾಘಿಸಿ ಮಾತನಾಡಿದ್ದರಲ್ಲಿ ಮಂಡನ ಮಿಶ್ರರಿಗೆ ಒಳಗೊಳಗೆ ಹೆಮ್ಮೆ ಎನಿಸಿತು.

ಮಂಡನ ಮಿಶ್ರ ಹೆಂಡತಿಯನ್ನು ಕರೆದು, ಈ ವ್ಯವಸ್ಥೆಗೆ ಆಕೆಯ ಸಮ್ಮತಿ ಇದೆಯೇ ಎಂದು ಕೇಳಿದರು. ಎಲ್ಲವನ್ನೂ ಕೇಳುತ್ತಿದ್ದ ಸರಸವಾಣಿ ತನ್ನ ಮುಖದಲ್ಲಿ ಯಾವ ಚಂಚಲತೆಯನ್ನೂ ತೋರ್ಪಡಿಸಿಕೊಳ್ಳದೆ ಶಾಂತವಾಗಿ ತಲೆಯಾಡಿಸಿದಳು.

ಮಾರನೆಯ ದಿನ ವಾಗ್ಯುದ್ಧ ಪ್ರಾರಂಭವಾಯಿತು. ವಾದ ಹಲವು ದಿನಗಳು ನಡೆಯಿತು. ಒಬ್ಬರಿಗಿಂತ ಮತ್ತೊಬ್ಬರು ನಿಸ್ಸೀಮರಾಗಿ ಕಂಡರು. ಒಂದೊಂದು ಕ್ಷಣಕ್ಕೆ ಒಬ್ಬೊಬ್ಬರು ಬುದ್ಧಿವಂತರಂತೆ ಕಂಡರು. ಈ ಸಮಸ್ಯೆಯನ್ನು ಪರಿಹರಿಸಲು ಸರಸವಾಣಿ ಒಂದು ಉಪಾಯ ಹೂಡಿದಳು. ಇಬ್ಬರ ಕೊರಳಿಗೂ ಒಂದು ಪುಷ್ಪ ಹಾರವನ್ನು ಹಾಕಿ, ಯಾರ ಕೊರಳಿನ ಹೂ ಬೇಗನೆ ಬಾಡಿಹೋಗುವುದೋ ಅವರು ತಮ್ಮ ಸೋಲನ್ನು ಒಪ್ಪಿಕೊಳ್ಳಬೇಕು ಎಂದು ಹೇಳಿದಳು.

ದುರದೃಷ್ಟದಿಂದ ಮಂಡನ ಮಿಶ್ರರ ಕೊರಳಿನಲ್ಲಿದ್ದ ಹೂಹಾರ ಒಣಗಲು ಪ್ರಾರಂಭವಾಯಿತು. ಅದನ್ನು ಗಮನಿಸಿದ ಶಂಕರ ಉತ್ಸಾಹದಿಂದ ಸರಸವಾಣಿಯ ಬಳಿ, "ಅಲ್ಲಿ ನೋಡು... ನಿನ್ನ ಗಂಡನ ಕೊರಳಿನ ಹಾರ ಮಂಕಾಗುತ್ತಿದೆ. ಅವರು ವಾದ ಮಾಡುವಾಗ ಬಹಳ ಭಾವುಕರಾಗುತ್ತಿದ್ದಾರೆ. ಕೋಪ ಬರುತ್ತಿದೆ. ನನ್ನ ವಾದಗಳನ್ನು ಎದುರಿಸಲು ಬೇಕಾದ ಸರಕು ಅವರಲ್ಲಿ ಕಡಿಮೆಯಾಗುತ್ತಿದೆ. ಅವರು ಭಯಪಡುವಂತೆ ಅನಿಸುತ್ತಿದೆ. ಷರತ್ತಿನ ಪ್ರಕಾರ ಅವರು ತನ್ನ ಸೋಲನ್ನು ಒಪ್ಪಿಕೊಳ್ಳಬೇಕು" ಎಂದರು.

ಸರಸವಾಣಿಯ ಮುಖ ಆ ಹೂವಿನ ಹಾರದಂತೆ ಬಾಡಲು ತೊಡಗಿತು. ಅವಳು ಒಂದು